ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 20 ನೇ ಮಾರ್ಚ್, 2020

ಪ್ರವಾಸೋದ್ಯಮ ಇಲಾಖೆಯ ನಿಗಮಗಳ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-

1388 (1662) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು ಅಂಗ ಸಂಸ್ಥೆಗಳು ಮತ್ತು ಸೊಸೈಟಿಗಳು ಹಾಗೂ ಇತರೆ ಎಷ್ಟಿವೆ; ಅವು ಯಾವುವು; (ಇಲಾಖಾವಾರು, ಕೇಂದ್ರ ಕಛೇರಿ ವಿಳಾಸ, ಹಾಗೂ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಇಲಾಖೆಯಡಿ ಹಾಲಿ ಜಾರಿಯಲ್ಲಿರುವ ಕೇಂದ್ರ ಸರ್ಕಾರದ ಪುರಸ್ಕೃತ / ಪ್ರಾಯೋಜಿತ/ಇತರೆ ಯೋಜನೆಗಳಾವುವು; ಸದರಿ ಯೋಜನೆಗಳಿಗೆ 2019-20 ನೇ ಸಾಲಿನಲ್ಲಿ ಎಷ್ಟು ಹಣ ಬಂದಿದೆ; ಇನ್ನೂ ಎಷ್ಟು ಹಣ ಬರಬೇಕಿದೆ; (ಯೋಜನಾವಾರು ಮಾಹಿತಿ ನೀಡುವುದು)

(ಇ) ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳು ಎಷ್ಟು ಹಣವನ್ನು ಬ್ಯಾಂಕ್‌ನಲ್ಲಿ ಎಫ್.ಡಿ ಇಟ್ಟಿವೆ; ಎಫ್.ಡಿ ಇಡಲು ಕಾರಣಗಳೇನು; ಈ ಹಣವನ್ನು ಯಾವಾಗ ಉಪಯೋಗಿಸಲಾಗುವುದು; ಸಂಸ್ಥೆವಾರು ಮಾಹಿತಿ ನೀಡುವುದು ?